**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಹತ್ತನೇ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2026
**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–24)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,

(i) (1)ನೇ ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) "ದುಷ್ಪ್ರೇರಿಸು" ಎಂಬುದು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 45ನೇ ಪ್ರಕರಣದಲ್ಲಿ ಅದಕ್ಕೆ ಗೊತ್ತುಪಡಿಸಿರುವಂತಹ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(1-ಎ) "ವಿದ್ಯುನ್ಮಾನ ದಾಖಲೆಗಳ ಅಂಗೀಕಾರಾರ್ಹತೆ" ಎಂಬುದು ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ ಸಂಖ್ಯೆ 47)ರ 63ನೇ ಪ್ರಕರಣದಲ್ಲಿ ಅದಕ್ಕೆ ಗೊತ್ತುಪಡಿಸಿರುವಂತ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(1-ಬಿ) "ಪರಭಾರೆ ಮಾಡಲಾದುದು" ಎಂದರೆ ಯಾರೇ ವ್ಯಕ್ತಿಯ ಮಾಲೀಕತ್ವವನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಸಂಬಂಧಿಸಿದ ಬಾಡಿಗೆ ಅಥವಾ ಕಂದಾಯವನ್ನು ಪಾವತಿಸಲು ರಾಜ್ಯ ಸರ್ಕಾರದ ಹಕ್ಕುಗಳಷ್ಟರ ಮಟ್ಟಿಗೆ ವರ್ಗಾಯಿಸಲಾದುದು;"

(ii) (4)ನೇ ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(4) "ಪ್ರಮಾಣೀಕೃತ ನಕಲು" ಅಥವಾ "ಪ್ರಮಾಣೀಕೃತ ಉದ್ಧೃತ ಭಾಗ" ಎಂದರೆ, ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ ಸಂಖ್ಯೆ 47)ರ 75ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪ್ರಮಾಣೀಕರಿಸಿದ ನಕಲು ಅಥವಾ ಸಂದರ್ಭಾನುಸಾರ ಉದ್ಧೃತ ಭಾಗ;"

(iii) (5)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(5ಎ) "ಮೋಸಮಾಡುವುದು" ಎಂದರೆ ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 318ನೇ ಪ್ರಕರಣದಲ್ಲಿ ಅದಕ್ಕೆ ಗೊತ್ತುಪಡಿಸಿರುವಂತಹ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(iv) (9)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(9ಎ) "ನಕಲು ದಾಖಲೆ ಸೃಷ್ಟಿ" ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 336ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಅದಕ್ಕೆ ಗೊತ್ತುಪಡಿಸಿರುವಂತಹ ಅದೇ ಅರ್ಥವನ್ನು ಹೊಂದಿರತಕ್ಕದ್ದು;"

(v) (37)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

(37-ಎ) "ಮೌಲ್ಯಯುತ ಭದ್ರತೆ" ಯಾವುದೇ ಸಿಂಧುವಾಗಿರುವ ಅಥವಾ ಆಗಿಲ್ಲದ್ದನ್ನು ಗಣನೆಗೆ ತೆಗೆದುಕೊಳ್ಳದೇ ಕಾನೂನು ಹಕ್ಕನ್ನು ಸೃಜಿಸುವ, ಬದಲಾಯಿಸುವ ಅಥವಾ ರಚಿಸುವ ಅಥವಾ ಕೊನೆಗೊಳಿಸುವ, ಯಾವುದೇ ಕಾಗದ ಪತ್ರ, ದಾಖಲೆ ಅಥವಾ ವಿದ್ಯುನ್ಮಾನ ಅಥವಾ ಅನ್ಯಥಾ ದಸ್ತಾವೇಜು ಹಾಗೂ ಯಾವುದೇ ಕ್ಲೇಮು, ಹಕ್ಕು, ಹಕ್ಕುಸ್ವಾಮ್ಯ ಇತ್ಯಾದಿಗಳಲ್ಲಿ ಪುರಾವೆಯಾಗಿ ಸಲ್ಲಿಸಲಾದ ಸ್ವತ್ತು ಕ್ರಯ ಪತ್ರಗಳು ಮತ್ತು ಭೂ ಹಕ್ಕು ಸ್ವಾಮ್ಯಗಳು, ಉಯಿಲು ಮತ್ತು ಮರಣ ಶಾಸನ, ಕಂದಾಯ ಸ್ವೀಕೃತಿಗಳು ಮತ್ತು ಇತರ ದಸ್ತಾವೇಜುಗಳನ್ನು ಒಳಗೊಂಡಿರತಕ್ಕದ್ದು.,"

**3. 96ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 96ನೇ ಪ್ರಕರಣದಲ್ಲಿನ, (4)ನೇ ಉಪ-ಪ್ರಕರಣದಲ್ಲಿ "ಡೆಪ್ಯೂಟಿ ಕಮಿಷನರ್‌ನ ಅನುಮತಿ ಇಲ್ಲದೆ ಅಥವಾ 95ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಗೊತ್ತುಪಡಿಸಿದ ಅವಧಿಯು ಕೊನೆಗೊಳ್ಳುವುದಕ್ಕೆ ಮುಂಚೆ ಅಥವಾ 95ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಅಥವಾ ವಿಧಿಸಿದ ಷರತ್ತನ್ನು ಉಲ್ಲಂಘಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಅಥವಾ ಬಳಸಿದ್ದರೆ, ಡೆಪ್ಯೂಟಿ ಕಮಿಷನರ್‌ನು," ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳ ಬದಲಿಗೆ, "ಡೆಪ್ಯೂಟಿ ಕಮೀಷನರ್ ಅಥವಾ ನಿಯಮಿಸಿದ ಅಧಿಕಾರಿಯು 95ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶ ಅಥವಾ ವಿಧಿಸಿದ ಷರತ್ತನ್ನು ಉಲ್ಲಂಘಿಸಿದಲ್ಲಿ, ಡೆಪ್ಯೂಟಿ ಕಮೀಷನರ್ ಅಥವಾ ನಿಯಮಿಸಿದ ಅಧಿಕಾರಿಯು" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**4. 195 ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯದಲ್ಲಿ, 195ನೇ ಪ್ರಕರಣದ, (2)ನೇ ಉಪ – ಪ್ರಕರಣದ ಕೊನೆಯಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ರಾಜ್ಯ ಸರ್ಕಾರವು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಆದೇಶದ ಮೂಲಕ, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ನಿಯಮಿಸಬಹುದಾಂಥ ವಿಧಾನದ ಅನುಸಾರವಾಗಿ, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಯಾವುದೇ ವಿಚಾರಣೆ ಅಥವಾ ಅಧ್ಯಯನ ಅಥವಾ ಸಂಶೋಧನೆಯನ್ನು ನಡೆಸಲು ಯಾರೇ ವ್ಯಕ್ತಿಗೆ ಅಥವಾ ಅದರ ಅಧೀನ ಅಧಿಕಾರಿಗಳ ತಂಡಕ್ಕೆ, ಅಥವಾ ಸಂಬಂಧಪಟ್ಟ ಯಾವುದೇ ಕ್ಷೇತ್ರದಲ್ಲಿನ ತಜ್ಞರು ಅಥವಾ ನಿವೃತ್ತ ನ್ಯಾಯಿಕ ಸದಸ್ಯರನ್ನು ಒಳಗೊಳ್ಳಬಹುದಾದ ಅಥವಾ ಒಳಗೊಳ್ಳದ ವಿಶೇಷವಾಗಿ ರಚಿಸಲಾದ ಸಮಿತಿಗೆ ಅಧಿಕಾರವನ್ನು ವಹಿಸಬಹುದು."

**5. 197ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯದಲ್ಲಿ, 197ನೇ ಪ್ರಕರಣದ, (2)ನೇ ಉಪ – ಪ್ರಕರಣದಲ್ಲಿನ, (ಒಒ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಪಿಪಿ) 192-ಎ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಗುರುತಿಸಲು ಮತ್ತು ಅಭಿಯೋಜಿಸಲು ನಿಯಮಿಸಲಾದ ಅಧಿಕಾರಗಳು ಮತ್ತು ಕಾರ್ಯವಿಧಾನಗಳನ್ನು ನಿಯಮಿಸುವುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964 ರ ಕರ್ನಾಟಕ ಅಧಿನಿಯಮ 12) ಅನ್ನು ಈ ಮುಂದಿನವುಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ,-

1. " ದುಷ್ಪ್ರೇರಿಸು", " ಮೋಸಮಾಡುವುದು ", "ನಕಲು ದಾಖಲೆ ಸೃಷ್ಟಿ", "ಮೌಲ್ಯಯುತ ಭದ್ರತೆ" ಎಂಬ ಪದಗಳನ್ನು ಪರಿಭಾಷಿಸುವುದು ಮತ್ತು "ಪ್ರಮಾಣೀಕೃತ ನಕಲು" ಎಂಬ ಪದವನ್ನು ಮರು-ಪರಿಭಾಷಿಸುವುದು;
2. 95 ಮತ್ತು 96ನೇ ಪ್ರಕರಣದ ಉದ್ದೇಶಗಳಿಗಾಗಿ ಅಧಿಕಾರಿಯನ್ನು ಗೊತ್ತುಪಡಿಸುವುದು;
3. ರಾಜ್ಯ ಸರ್ಕಾರವು, ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ಸಂಬಂಧಪಟ್ಟ ಯಾವುದೇ ವಿಷಯಗಳ ಬಗ್ಗೆ ವಿಚಾರಣೆ ನಡೆಸಲು, ಅಧ್ಯಯನ ಮಾಡಲು ಅಥವಾ ಸಂಶೋಧನೆಯನ್ನು ನಡೆಸಲು ಯಾರೇ ಅಧಿಕಾರಿಗೆ ಅಧಿಕಾರವನ್ನು ವಹಿಸಬಹುದು; ಮತ್ತು
4. ಕೆಲವು ಅನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 4:** | 195ನೇ ಪ್ರಕರಣದ (2)ನೇ ಉಪ-ಪ್ರಕರಣಕ್ಕೆ ಪರಂತುಕವನ್ನು ಸೇರಿಸಲು ಪ್ರಸ್ತಾವಿಸಲಾದ 4ನೇ ಖಂಡವು, ಈ ಅಧಿನಿಯಮಕ್ಕೆ ಸಂಬಂಧಿಸಿದ ಯಾವುದೇ ವಿಷಯವನ್ನು ವಿಚಾರಿಸಲು ಅಥವಾ ಅಧ್ಯಯನ ಮಾಡಲು ಅಥವಾ ಸಂಶೋಧಿಸಲು ಆದೇಶದ ಮೂಲಕ ಯಾವುದೇ ಅಧಿಕಾರಿಯನ್ನು ನಿಯೋಜಿಸುವ ಕುರಿತು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಡಾ. ಜಿ. ಪರಮೇಶ್ವರ**
ಉಪಮುಖ್ಯಮಂತ್ರಿ ಮತ್ತು ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964**

**(1964ರ ಕರ್ನಾಟಕ ಅಧಿನಿಯಮ 12)ರ ಉದ್ಧೃತ ಭಾಗ.**

**XXX XXX XXX**

**2. ಪರಿಭಾಷೆಗಳು,-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯತಾ ಅಗತ್ಯಪಡಿಸಿದ ಹೊರತು, -

(1) "ವರ್ಗಾವಣೆ ಮಾಡಿದ" ಎಂದರೆ, ಗೇಣಿಯನ್ನು ಅಥವಾ ಕಂದಾಯವನ್ನು ಸಲ್ಲಿಸುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ಹಕ್ಕುಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ ಯಾರೇ ವ್ಯಕ್ತಿಯ ಒಡೆತನಕ್ಕೆ ವರ್ಗಾವಣೆ ಮಾಡಲಾದುದು;

**XXX XXX XXX**

(4) "ಪ್ರಮಾಣೀಕೃತ ನಕಲು" ಅಥವಾ "ಪ್ರಮಾಣೀಕೃತ ಉದ್ಧೃತ ಭಾಗ" ಎಂದರೆ, ಭಾರತ ಸಾಕ್ಷ್ಯ ಅಧಿನಿಯಮ, 1872ರ (ಕೇಂದ್ರ ಅಧಿನಿಯಮ 1872ರ 1) 76ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಂದರ್ಭಾನುಸಾರ ಪ್ರಮಾಣೀಕರಿಸಿದ ನಕಲು ಅಥವಾ ಉದ್ಧೃತ ಭಾಗ;

(5) "ಚಾವಡಿ" ಎಂಬುದರಲ್ಲಿ ಚಾವಡಿ ಇಲ್ಲದಿರುವ ಯಾವುದೇ ಗ್ರಾಮದಲ್ಲಿ ಡೆಪ್ಯುಟಿ ಕಮಿಷನರು, ಈ ಅಧಿನಿಯಮದ ಉದ್ದೇಶಕ್ಕಾಗಿ ಅಧಿಸೂಚನೆಯ ಮೂಲಕ ಚಾವಡಿಯೆಂದು ನಿಶ್ಚಯ ಮಾಡಿದಂತಹ ಸ್ಥಳವು ಸೇರುತ್ತದೆ;

**XXX XXX XXX**

(9) "ಎಸ್ಟೇಟ್" ಎಂದರೆ, ಭೂಮಿಯಲ್ಲಿನ ಹಿತಾಸಕ್ತಿ ಮತ್ತು ಭೂಮಿಯಲ್ಲಿನ ಯಾವುದೇ ಹಿತಾಸಕ್ತಿಯನ್ನು ಹೊಂದಿರಲು ಸಮರ್ಥವಾಗಿರುವ ವ್ಯಕ್ತಿಯಲ್ಲಿ ಅಥವಾ ವ್ಯಕ್ತಿಗಳ ಸಮೂಹದಲ್ಲಿ ನಿಹಿತವಾಗಿರುವ, ಒಟ್ಟುಗೂಡಿರುವ ಅಂಥ ಹಿತಾಸಕ್ತಿ ;

**XXX XXXX XXX**

(37) "ನ್ಯಾಯಾಧಿಕರಣ" ಎಂದರೆ 40ನೇ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ರೆವಿನ್ಯೂಅಪೀಲು ನ್ಯಾಯಾಧಿಕರಣ;

**XXX XXX XXX**

**96. ಬೇಸಾಯದ ಭೂಮಿಯನ್ನು ಅನುಮತಿ ಇಲ್ಲದೆ ಇತರ ಉದ್ದೇಶಕ್ಕಾಗಿ ಬಳಸುವುದಕ್ಕೆ ದಂಡ.-**

**XXX XXX XXX**

(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಂದಾಯದನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಭೂಮಿಯನ್ನು ಡೆಪ್ಯೂಟಿ ಕಮಿಷನರ್‌ನ ಅನುಮತಿ ಇಲ್ಲದೆ ಅಥವಾ 95ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಗೊತ್ತುಪಡಿಸಿದ ಅವಧಿಯು ಕೊನೆಗೊಳ್ಳುವುದಕ್ಕೆ ಮುಂಚೆ ಅಥವಾ 95ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇ±ವನ್ನು ಅಥವಾ ವಿಧಿಸಿದ ಷರತ್ತನ್ನು ಉಲ್ಲಂಘಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಅಥವಾ ಬಳಸಿದ್ದರೆ, ಡೆಪ್ಯೂಟಿ ಕಮಿಷನರ್‌ನು, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಮತ್ತು ಕಟ್ಟಡಗಳ ನಿರ್ಮಾಣ ಅಥವಾ ಬಾವಿಗಳು ಹಾಗೂ ಕೆರೆಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, ಮತ್ತು ಗೊತ್ತುಪಡಿಸಿದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಬೇರೆಬೇರೆ ಪ್ರದೇಶಗಳಿಗೆ ಅಥವಾ ಬೇರೆಬೇರೆ ಉಲ್ಲಂಘನೆಗಳಿಗೆ ಅಥವಾ ಯಾವ ಉದ್ದೇಶಗಳಿಗೆ, ಪರಿವರ್ತನೆಗೆ ಅಥವಾ ಬಳಕೆಯನ್ನು ಮಾಡಲಾಗಿದೆಯೋ ಆ ವಿವಿಧ ಉದ್ದೇಶಗಳಿಗೆ ಬೇರೆಬೇರೆಯಾಗಿರಬಹುದಾದಂಥ ಗೊತ್ತುಪಡಿಸಿದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಅಂಥ ಪತಿವರ್ತನೆಗೆ ಅಥವಾ ಬಳಕೆಗೆ ವಿನಾಯಿತಿ ಕೊಡಬಹುದು.

**XXX XXX XXX**

**195. ಅಧಿಕಾರಗಳನ್ನು ವಹಿಸಿಕೊಡುವುದು.- XXX XXX XXX**

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು 3, 4, 6, 7, 8, 9, 10, 18, 20, 21, 40, 43, 48, 114, 115, 121 ಅಥವಾ 125ನೇ ಪ್ರಕರಣಗಳ ಮೇರೆಗಿನ ತನ್ನ ಯಾವುವೇ ಅಧಿಕಾರಗಳನ್ನು ಅಥವಾ 19ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವನ್ನು ಅಥವಾ 210ನೇ ಪ್ರಕರಣದ ಮೇರೆಗೆ ತೊಂದರೆಗಳನ್ನು ನಿವಾರಿಸುವ ಅಧಿಕಾರವನ್ನು ವಹಿಸಿಕೊಡತಕ್ಕದ್ದಲ್ಲ.

**XXX XXX XXX**

KARNATAKA LEGISLATIVE ASSEMBLY
SIXTEENTH LEGISLATIVE ASSEMBLY
TENTH SESSION

# THE KARNATAKA LAND REVENUE (AMENDMENT) BILL, 2026

## (LA Bill No. 24 of 2026)

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing:

Be it enacted by the Karnataka State Legislature in the Seventy seventh year of the Republic of India, as follows:-

**1. Short title and commencement.-**(1) This Act may be called the Karnataka Land Revenue (Amendment) Act, 2026.

(2) It shall come into force at once.

**2. Amendment of section 2.-** In the Karnataka Land Revenue Act, 1964 (Karnataka Act 12 of 1964) (hereinafter referred to as the Principal Act), in section 2,-

(i) for clause (1), the following shallsubstituted namely:-

"(1) "abet" and shall have the same meaning as assigned in section 45 of the Bharatiya Nyaya Sanhita, 2023 (Central Act 45 of 2023);

(1-A) "admissibility of electronic records" shall have the same meaning assigned in section 63 of BharatiyaSakshyaAdhiniyam, 2023 (Central Act No. 47 of 2023)."

(1-B) "alienated" means transferred in so far as rights of the State Government to payment of the rent or revenue are concerned, wholly or partially, to the ownership of any person;"

(ii) for clause (4) the following shall besubstituted, namely:-

"(4)"certified copy" or "Certified extract", means copy or extract as the case may be certified in the manner specified in section 75 of Bharatiya Sakshya Adhiniyam, 2023 (Central Act No. 47 of 2023);"

(iii) after clause (5), the following shall be inserted, namely: –

(5-A) "cheating" shall have the same meaning as assigned in section 318 of the Bharatiya Nyaya Sanhita, 2023 (Central Act 45 of 2023);"

(iv)afterclause (9), the following shall beinserted, namely:-

(9-A) "forgery" shall have the same meaning as assigned in sub-section (1) of section 336 of the Bharatiya Nyaya Sanhita, 2023 (Central Act 45 of 2023);"

(v)afterclause (37) the following shall beinserted, namely:-

(37-A) "valuable security" means any paper, record, or document electronic or otherwise, which can create, change, make, or end a legal claim irrespective of whether it is valid or not, and shall include property sale deeds and land titles, will and testament, revenue receipts and other documents submitted as proof in any claim, right, title etc.,."

**3. Amendment of section 96.-** In the Principal Act,in section 96,insub-section (4), for the words, brackets and figures "the Deputy Commissioner or before the expiry of the period prescribed in sub-section (5) of section 95 or in contravention of an order passed or of a condition imposedunder section 95, the Deputy Commissioner", the words, and figures "the Deputy Commissioner or prescribed officer in contravention of an order passed or of a condition imposedunder section 95, the Deputy Commissioner or prescribed officer", shall be substituted.

**4. Amendment of section 195.-** In the Principal Act, in section 195,in sub-section (2),the following proviso shall be inserted at the end, namely:-

"Provided that, the State Government, for reasons to be recorded in writing, assign by an order, any officer or a group of officers subordinate to it or a specially constituted committee which may or may not include experts in any relevant field or retired members of the judiciary, any enquiry or investigation or study or research into any matter related to this Act and rules made thereunder, subject to such terms and conditions as may be specified in the said order and in accordance with such procedure as may be prescribed."

**5. Amendment of section 197.-** In the Principal Act, in section 197, in sub section (2), after clause (oo), the following clause shall be inserted, namely:–

"**(pp)** Prescribing powers and procedures for identification and prosecution of offences punishable under section 192-A."

## STATEMENT OF OBJECTS AND REASONS

It is considered necessary further to amend the Karnataka Land Revenue Act, 1964 (Karnataka Act 12 of 1964)to,-

(1) define the words “Abet”,“admissibility of electronic records”, “alienated”, “cheating”, “forgery”, “Valuable security” and to re-define the word “certified copy”;

(2) prescribe an officer purposes of section 95 and 96;

(3) empower the state Government to assign by order any officer to enquire or study or research into any matters related under the provisions of the Act; and

(4) certain consequential amendments are also made.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

## MEMORANDUM REGARDING DELIGATED LEGISLATION

| | |
|---|---|
| Clause 4 | Clause 4 proposed to insert proviso to sub-section (2) of section 195 empowers the State Government to prescribe by rules procedure to assign any officer, by an order to enquire or study or research any matter to related to the Act. |

**DR. G. PARAMESHWARA**
Deputy Chief Minister & Minister for Revenue

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA LAND REVENUE ACT, 1964

## (Karnataka Act 12 of 1964)

**XXX XXX XXX**

**2. Definitions.—**in this Act, unless the context otherwise requires,—

(1) "alienated" means transferred in so far as rights of the State Government to payment of the rent or revenue are concerned, wholly or partially, to the ownership of any person;

**XXX XXX XXX**

(4) "certified copy" or "certified extract" means copy or extract, as the case may be,certified in the manner prescribed by section 76 of the Indian Evidence Act, 1872 (CentralAct 1 of 1872);

(5) "chavadi" includes, in any village in which there is no chavadi, such place as theDeputy Commissioner may by notification direct to be the chavadi for the purpose of this Act;

**XXX XXX XXX**

(9) "estate" means any interest in land and the aggregate of such interests vested in aperson or body of persons capable of holding the same;

**XXX XXX XXX**

(37) "Tribunal" means the Karnataka Revenue Appellate Tribunal constituted undersection 40;

**XXX XXX XXX**

**96. Penalty for using agricultural land for other purpose without permission.—**

**XXX XXX XXX**

(4) Notwithstanding anything contained in this section, when any land assessed or held for the purpose of agriculture has been diverted or used for any other purpose without the permission of the Deputy Commissioner or before the expiry of the period prescribed in sub- section (5) of section 95 or in contravention of an order passed or of a condition imposed under section 95, the Deputy

Commissioner may, subject to such rules as may be prescribed and subject to any law for the time being in force regarding erection of buildings or construction of wells and tanks, and subject to prescribed terms and conditions, compound such diversion or use, on payment of the prescribed amount, which may be different for different areas or for different contraventions or for different purposes for which the diversion or use is made.

**XXX XXX XXX**

**195. Delegation of powers.-XXX XXX XXX**

(2) Notwithstanding anything contained in sub-section (1), the State Government shall not delegate any of its powers under sections 3, 4, 6, 7, 8, 9, 10, 18, 20, 21, 40, 43, 48, 114, 115, 121 or 125 or the power to make rules under section 197 or the power to remove difficulties under section 201.

**XXX XXX XXX**

Govt. Press, Vikasa Soudha, Bengaluru, 22nd August, 2026, P7, W.D. , Copies 500